

**ನಾನು ಅಂದು ರಾತ್ರಿ ಕುಡಿದ ಆ ಒಂದು ಲೋಟ ಹಾಲನ್ನು ನನಗೆ ಅರಗಿಸಿಕೊಳ್ಳಲಾಗಲಿಲ್ಲ. ಅವಳ ದೇಹದಿಂದ ಬಸಿದ, ನಾನು ಕುಡಿದ ಮಗನ ಹಕ್ಕಿನ ಹಾಲು ನನ್ನ ಜೀವ ಹಿಂಡುತ್ತಿತ್ತು.**

ನಗು ಮೊಗದ ಮೇಲೆ ಹಾದು ಹೋಯಿತು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ಅದೇ ಚಪ್ಪಲಿಯ ಸದ್ದು! ಅರೇ! ಆತ ಮುಂದೆ ನಡೆಯುತ್ತಿದ್ದಾನೆ! ಅದು ಎಲ್ಲಿಂದ ಆತ ಒಮ್ಮೆಗೆ ಕಾಣಿಸಿಕೊಂಡ? ಅಲ್ಲ, ನನ್ನ ಹೆಜ್ಜೆಯ ವೇಗ ನನಗೆ ಗೊತ್ತಿಲ್ಲದೇ ಹೆಚ್ಚಾಯಿತೇ? ಇಲ್ಲ, ಆತನ ನಡಿಗೆ ನಿಧಾನವಾಗಿರಬೇಕು. ಮನಸ್ಸಲ್ಲಿ ಸಣ್ಣ ಖುಷಿ. ಬಿರುಸಾದ ಹೆಜ್ಜೆ ಹಾಕಿದೆ. ನಾನು ಓಡುತ್ತಾ ಅವನಲ್ಲಿಗೆ ತಲುಪಿದೆ. ನನ್ನ ಕಣ್ಣಿನ ಅಳತೆಯಷ್ಟು ಹತ್ತಿರವಿರಲಿಲ್ಲ ಆತ ಎಂಬುದನ್ನು ನನ್ನ ಏದುಸಿರು ಹೇಳುತ್ತಿತ್ತು. ಆತ ನನ್ನತ್ತ ತಿರುಗಿ ಕೂಡ ನೋಡಲಿಲ್ಲ. ಅಷ್ಟು ದೊಡ್ಡ ಹುಲ್ಲಿನ ಹೊರೆಯನ್ನು ಹೊತ್ತುಕೊಂಡ ಆತ ನನ್ನತ್ತ ತಿರುಗಿ ನೋಡಬೇಕು ಎಂದು ನಾನು ಬಯಸುವುದು ಎಷ್ಟು ಮೂರ್ಖತನ. ಕತ್ತಲು ಬೇರೆ, ಅವನ ಮುಖ ಕೂಡ ಸರಿ ಕಾಣುತ್ತಿರಲಿಲ್ಲ. ಮುಖಕ್ಕೆ ಟಾರ್ಚಿನ ಬೆಳಕು ನೇರವಾಗಿ ಹಾಕುವುದು ಸಭ್ಯತನವಾಗಿರಲಿಲ್ಲ. ಹೇಗೆ ಮಾತನಾಡಿಸುವುದು ಎಂದು ಅರಿವಾಗದೆ ಸ್ವಲ್ಪ ದೂರ ಆತನ ಜೊತೆ ಹೆಜ್ಜೆ ಹಾಕಿದೆ. ಅವನು ಯುವಕನಾಗಿರಲಿಲ್ಲ. ಒಂದಿಷ್ಟು ವಯಸ್ಸಾಗಿದೆ ಎಂದು ಅನ್ನಿಸುತ್ತಿತ್ತು. ದಾರಿ ಮುಗಿಯುತ್ತಿತ್ತು. ನಾನು ಮಾತನಾಡಿಸದೇ ಇದ್ದರೆ ಅವನು ನನ್ನನ್ನು ಹಿಂದಿಕ್ಕಿ ಮುಂದೆ ಹೋಗಿ ಕಾಣದಾಗುತ್ತಿದ್ದ.

''ದಿನಾ ಹುಲ್ಲು ಒಯ್ಯುತ್ತೀರಿ ಅನ್ನಿಸುತ್ತೇ?...'' ಸುಮ್ಮನೆ ಮಾತಿಗೆಳೆದೆ. ಆತನ ಹೆಜ್ಜೆ ಒಂದಿಷ್ಟು ನಿಧಾನವಾಯಿತು ಅನ್ನಿಸಿತು. ಒಂದು ಸಣ್ಣ ನಿಟ್ಟುಸಿರು ಮೊದಲು ಬಂತು.

''ಹಾ... ಒಯ್ಯಲೇ ಬೇಕು ನಾನು. ಒಂದೇ ಒಂದು ದಿನ ಅವಳು ತರದಿದ್ದುದಕ್ಕೆ ತುಂಬಾ ಬೈದಿದ್ದೆ... ದಿನಾ ಹೊತ್ತುಕೊಂಡು ಹೋಗುವಾಗ ಅವಳ ಕಷ್ಟ ಏನು ಅಂತ ಅರ್ಥ ಆಗುತ್ತಿದೆ'' ಅವನ ಧ್ವನಿ ವಿಷಾದದಿಂದ ತಣ್ಣಗೆ ಕೊರೆಯುವಂತಿತ್ತು. ಆತ ತೀರಾ ಪರಿಚಿತನಂತೆ ಮಾತನಾಡಿದ್ದ. ಅವಳ ಬಗ್ಗೆ ಹೇಳಿದ್ದ. ಆದರೆ, ಅವಳು ಯಾರು ಎಂದು ನನಗೆ ಗೊತ್ತಾಗದೆ ತಲೆ ಕೆರೆದುಕೊಂಡೆ. ಅದು ಸ್ಪಷ್ಟವಾಗದೆ ನಾನು ಮಾತು ಮುಂದುವರಿಸಲಾಗುತ್ತಿರಲಿಲ್ಲ. ಧೈರ್ಯ ಮಾಡಿ ಕೇಳಿದೆ,

''ಅವಳು? ಯಾರು? ನನಗೆ ಗೊತ್ತಾಗಲಿಲ್ಲ.'' ಕೇಳಬಾರದಿತ್ತೇನೊ ಎಂದು ನಾಲಗೆ ತಡವರಿಸಿತು. ಆದರೆ, ಆತ ಅದನ್ನು ವಿಶೇಷವಾಗಿ ಪರಿಗಣಿಸಿದಂತೆ ಕಾಣಲಿಲ್ಲ. ಅವನು ಅವನಷ್ಟಕ್ಕೆ ಮುಂದುವರಿಸಿದ.

''ಎಲ್ಲರ ವಿರೋಧವಿದ್ದರೂ ಅವಳೇ ನನ್ನ ಸಂಗಾತಿ ಎಂದು ಮದುವೆ ಮಾಡಿಕೊಂಡಿದ್ದೆ. ನನ್ನ ಅತ್ತೆ ಮಗಳು ಅವಳು, ಅತ್ತೆಯ ಚಾರಿತ್ರ್ಯ ಚೆನ್ನಾಗಿಲ್ಲ ಅಂತ ನನ್ನಮ್ಮ ಆಕೆಯ ಮಗಳನ್ನು ಸೊಸೆಯಾಗಿ ಸ್ವೀಕರಿಸಲು ಒಪ್ಪಲೇ ಇಲ್ಲ. ನಾನು ಮದುವೆಯಾಗಿ ಮನೆಗೆ ಕರೆ ತಂದ ಅನಂತರವೂ ಅವರು ಅವಳನ್ನು ಸ್ವೀಕರಿಸಲಿಲ್ಲ. ಆದರೆ, ನಾನು ಅವಳನ್ನು ಬಹಳ ಪ್ರೀತಿಸಿದ್ದೆ. ನಾನು ಸಾಹುಕಾರನ ಹೊಲದಲ್ಲಿ ದಿನ ಪೂರ್ತಿ ಮೈಮುರಿದು ದುಡಿಯುತ್ತಿದ್ದೆ. ಸಂಸಾರಕ್ಕೆ ಸಾಕಾಗುವಷ್ಟು ಸಂಪಾದನೆ ಇತ್ತು. ಅಮ್ಮನ ಕಾಲ ಮುಗಿಯಿತು. ಅನಂತರ ನಾವಿಬ್ಬರೇ ಮನೆಯಲ್ಲಿ. ಸುಂದರ ಸಂಸಾರ ನಮ್ಮದು'' ಅವನು ಹೇಳುತ್ತಾ ಹೋಗುತ್ತಿದ್ದ. ನಾನು ಕೇಳುತ್ತಿದ್ದೆ. ಆತ ಮಾತು ನಿಲ್ಲಿಸುವುದು ನನಗೆ ಬೇಕಿರಲಿಲ್ಲ.